
ಮಲ್ಲಿಕಾರ್ಜುನ, ಸುರಧೇನುಪುರ
ಕೆಲವರು ಮನೆಯ ಮುಂದೆ ತೆಂಗಿನ ಮರ ಇರಬಾರದು ಅಂತಾರೆ. ಏನವರ ಮರ್ಮ?




ಆಗಲೇ ಮೂರು ಬಾರಿ ಗರಿ ಬಿದ್ದು ಕಾರಿನ ಗಾಜು ಒಡೆದಿರುವುದೇ.

ಹೆಚ್.ವಿ. ಶ್ರೀಧರ್, ಬೆಂಗಳೂರು
ವಾಹಿನಿಯೊಂದರಲ್ಲಿ 'ಸಾವಿಗೂ ಮುಂಚೆ ವಿಲ್ ಬರೆದಿದ್ದ ಭೈರಪ್ಪ' ಎಂದಿತ್ತು. ಸಾವಿನ ನಂತರವೂ ಬರೆಯಬಹುದೆ?
'ನೆನಪಿನ ಸಾವಿಗೂ ಮುಂಚೆ' ಎಂದು ಹೇಳಲು ಆ ಶುದ್ಧ ಮೊದ್ದು ವಾಹಿನಿಗೆ ತಿಳಿಯಲಿಲ್ಲವಂತೆ.

ಹೆಚ್. ಮಂಜಪ್ಪ, ಸಂತೆಬೆನ್ನೂರು
ಕೃಷ್ಣನ ಲೆಕ್ಕ ಎಂದರೇನು?
ಅಷ್ಟೆಲ್ಲ ಅಕ್ಷೋಹಿಣಿಯ ಸಿರಿ ಇದ್ದೂ ಯಾವುದೂ ಗಣನೆಗೆ ಅರ್ಹವಲ್ಲವೆನಿಸಿದ ಲೆಕ್ಕ.

ಶಿಹಿಮೊಗೆ ರಮೇಶ್, ಮೈಸೂರು
ಅತಿ ಹೆಚ್ಚು ಸುಳ್ಳು ಹೇಳುವ ಸ್ಥಳ ಮತ್ತು ಅತಿ ನಿಜ ಹೇಳುವ ಸ್ಥಳ ಯಾವುದು?



ಕೋರ್ಟು, ಹೆಂಡದಂಗಡಿ.

ವಾಸಣ್ಣ, ಧಾರವಾಡ
ನಮ್ಮ ದೇಶಕ್ಕೆ ಮಧ್ಯರಾತ್ರಿ ಸ್ವಾತಂತ್ರ್ಯ ದೊರೆತುದರಿಂದಲೇ ಅಭಿವೃದ್ಧಿ ಎಂಬುದು ಕನಸಾಗಿಯೇ ಉಳಿದಿದೆಯೆ?
ಮಧ್ಯಾಹ್ನ ದೊರೆತರೂ ಹೀಗೇ ಇರುತ್ತಿತ್ತು. ಅಭಿವೃದ್ಧಿಗೆ ಬೇಕಾದ್ದು ದೇಶಸೇವೆ; ಇರುವುದು ದೇಶ ಸೇವನೆ.

ಎನ್. ವೈದೇಹಿ, ಮೈಸೂರು
ಸತ್ಯಕ್ಕೆ ಸಾವಿಲ್ಲ, ಸತ್ಯಮೇವ ಜಯತೇ ಎಂಬ ನುಡಿಗಳು ಸಮಾಜದಲ್ಲಿ ಎಷ್ಟರ ಮಟ್ಟಿಗೆ ನಿಜವಾಗುತ್ತವೆ?
ಸಾವಿಲ್ಲ ಸರಿ, ನೆಲೆಯೂ ಇಲ್ಲ; ಸತ್ಯವನ್ನು ಮೇಯುವವನೇ ಜಯಿಸುವನು ಎಂಬ ಮಟ್ಟಕ್ಕೆ.

ಬೂಕನಕೆರೆ ವಿಜೇಂದ್ರ, ಮೈಸೂರು
ರಾವಣನಿಗೆ ಹತ್ತು ತಲೆ ಇದ್ದರೂ ಪರಸ್ತ್ರೀಯನ್ನು ಮುಟ್ಟಬಾರದೆಂದು ಯಾವ ತಲೆಗೂ ಹೊಳೆಯಲಿಲ್ಲವೆ?
ಐದು ತಲೆಗಳು ಮುಟ್ಟಬೇಡ ಎಂದವಂತೆ. ಶೂರ್ಪನಖಿಯ ತಲೆ ಸೇರಿ ಆರಕ್ಕೆ ಮೆಜಾರಿಟಿ ಸಿಕ್ಕಿತಂತೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ನೀವು ರಾಜ್ಯದ ಮುಖ್ಯಮಂತ್ರಿಯಾದರೆ ಜನತೆಗೆ ಹೇಗೆ ಉತ್ತರಿಸುವಿರಿ?
ಸೌಮ್ಯವಾಗಿ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಪ್ರಾಮಾಣಿಕತೆ ಎಂದರೇನು? ಅದು ಈಗ ಎಲ್ಲಿ ಸಿಗುತ್ತದೆ?
ಬೆಳಕಿನ ಹೆಸರಿರುವ ನಿಮ್ಮಲ್ಲೇ ಇಲ್ಲವೆಂದರೆ ಹುಡುಕಿ ಪ್ರಯೋಜನವಿಲ್ಲ ಬಿಡಿ.

ಅನಸೂಯಾ ಟಿ, ಕೇದಿಗೆಮನೆ
ಎರಡೇ ವರ್ಷಕ್ಕೆ ಬರುತ್ತೇನೆ ಎಂದು ವಿದೇಶಕ್ಕೆ ಹೋದವರು ಸ್ವದೇಶಕ್ಕೆ ಮರಳದಿರಲು ಕಾರಣ?
ಇಪ್ಪತ್ತು ವರ್ಷಕ್ಕಾಗುವಷ್ಟು ಮನೆ, ವಾಹನಗಳ ಸಾಲವನ್ನು ಎರಡೇ ವರ್ಷದಲ್ಲಿ ಮಾಡುವುದರಿಂದ.

ಜಗದೀಶ ಬಿ. ಹೊಸೂರು, ಮೈಸೂರು
ಪುರುಷರಿಗೆ ಶ್ರೀ ಎಂದು, ಸ್ತ್ರೀಯರಿಗೆ ಮತಿ ಸೇರಿಸಿ ಶ್ರೀಮತಿ ಎನ್ನುವುದೇಕೆ?
ಅದೇ ಪ್ರಮಾದವಾಗಿದ್ದು. ಸತಿಯು 'ನಿಮಗೆ ಬುದ್ಧಿ ಇಲ್ಲ' ಎನ್ನುವುದಕ್ಕೆ ಅದೇ ಆಧಾರವಾಗಿಬಿಟ್ಟಿತು.

ರಾಮಸ್ವಾಮಿ, ಭೀಮನಕಟ್ಟೆ
ಹೆಚ್ಚಿನ ವರದಿಗಾರರು 'ಅ–ಹ, ಸ–ಷ–ಶ'ಗಳನ್ನು ಒಂದೇ ರೀತಿ ಉಚ್ಚರಿಸುವುದರಿಂದ ಅಕ್ಷರಗಳನ್ನು ಕಡಿಮೆ ಮಾಡುವುದೊಳಿತಲ್ಲವೆ?
ಛೀ. ಹತ್ತಲಾಗದೆಂದು ಬೆಟ್ಟವನ್ನು ಪುಡಿ ಮಾಡುವರೇನು? ಅಂತಹ ವರದಿಗಾರರನ್ನು ಹೊರಹಾಕಿ.


## ಬಹುಮಾನಿತ ಪ್ರಶ್ನೆ

ಬಿ. ನಾಗರಾಜು, ಬೆಂಗಳೂರು
ಬಗೆಹರಿಸಬಹುದಾದ ಸಮಸ್ಯೆಗಳಿಗೆ ಹೆದರಿ ಆತ್ಮಹತ್ಯೆಯ ಯೋಚನೆ ಮಾಡುವವರಿಗೆ ಕಿವಿಮಾತು?
ಆಪ್ತರೊಡನೆ ಮಾತು ಬೆಳೆಸಿ, ಕತ್ತು ಉಳಿಸಿ.

ಮೀನಾಕ್ಷಿ ರಂಗನ್, ಮೈಸೂರು
ಷಡ್ಯಂತ್ರಕ್ಕೂ, ಚಾಣಕ್ಯ ತಂತ್ರಕ್ಕೂ ಇರುವ ವ್ಯತ್ಯಾಸವೇನು?
ಚಾಣಕ್ಯ ತಂತ್ರ ಅರ್ಥಶಾಸ್ತ್ರ; ಷಡ್ಯಂತ್ರ ಅರ್ಥದ ಅಸ್ತ್ರ.

ಎಸ್. ವಿಜಯಕುಮಾರಿ
ಇತ್ತೀಚೆಗೆ ಮದುವೆ ಇಲ್ಲದೆ ಮಗು ಹೆರುವ ಪದ್ಧತಿ ಶುರುವಾಗಿದೆಯಲ್ಲ ರಾಂಜೀ?
'ಇತ್ತೀಚೆಗೆ ಅಂತೆ. ಒಳ್ಳೇ ಜೋಕ್!' ಎಂದಳಾ ಕುಂತಿ.

ಕೆ. ಶ್ರೀನಿವಾಸ, ಬೆಂಗಳೂರು
ದಸರೆಯಲ್ಲಿ ಅಂಬಾರಿ ಹೊರುವ ಗಂಡಾನೆಯ ಅಕ್ಕಪಕ್ಕದಲ್ಲಿ ಹೆಣ್ಣಾನೆಗಳಿರುತ್ತವೆ. ಏಕೆ?



ಸುಂದರಿಯರ ಮುಂದೆ ಯಾವುದೇ ಗಂಡಿನಂತೆ ಸಲಗವೂ ಘನತೆಯಿಂದ ವರ್ತಿಸುತ್ತದೆಂದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅಕಾಲಿಕಕ್ಕೂ, ಸಕಾಲಿಕಕ್ಕೂ ವ್ಯತ್ಯಾಸವೇನು?
ಮಳೆಯಿಂದ ಬೆಳೆ ಹಾಳಾದರೆ ಮಳೆ ಅಕಾಲಿಕ; ಅದಕ್ಕೆ ಬಂಪರ್ ಪರಿಹಾರ ಬಂದರೆ ಸಕಾಲಿಕ.

ಎಂ.ಎ. ಕುಮಾರ್, ಬೆಂಗಳೂರು
ಭೂಮಂಡಲದಲ್ಲಿ ಮಾನವನ ಮೊದಲ ಸಾವು ಎಲ್ಲಿ?
ಕಾಡಿನಲ್ಲಿ– ಆಗ ಇದ್ದದ್ದೆಲ್ಲಾ ಕಾಡೇ.

ಪಿ. ಜಯವಂತ ಪೈ, ಕುಂದಾಪುರ
ಎಮ್ಮೆಗೂ, ಎಮ್ಮೆಲ್ಲೆಗೂ ವ್ಯತ್ಯಾಸವೇನು?
ಎಮ್ಮೆ ಹುಲ್ಲು ತಿನ್ನುತ್ತದೆ; ಎಮ್ಮೆಲ್ಲೆ **full** ತಿನ್ನುತ್ತಾನೆ.

■ **ರಾಮ್**